ಗ್ರಾ.ಪಂ. ಮಟ್ಟದಲ್ಲಿ ಎಲ್ಲಾ ಮಾಹಿತಿ ಸಂಗ್ರಹ | ಭುವನ್ ಪಂಚಾಯತ್ 3.0 ಹೆಸರಿನ ಯೋಜನೆ

# ಅಂಗೈಯಲ್ಲಿ 2.56 ಲಕ್ಷ ಗ್ರಾ.ಪಂ. ಮಾಹಿತಿ!



- **ಜನಸಂಖ್ಯೆ, ಭೂ ಪ್ರದೇಶ, ಆರೋಗ್ಯ, ಶಿಕ್ಷಣ, ಸಾಮಾಜಿಕ-ಆರ್ಥಿಕ ಸ್ಥಿತಿ ದತ್ತಾಂಶ ಸಂಗ್ರಹ**
- **ಸರ್ಕಾರ ರೂಪಿಸುವ ಯೋಜನೆ ಗಳಿಗೆ ಇದರಿಂದ ಭಾರೀ ಪ್ರಯೋಜನ: ಇಸ್ರೋ**

ಬೆಂಗಳೂರು: ಇಡೀ ದೇಶದ ಎಲ್ಲ ಎರಡೂವರೆ ಲಕ್ಷ ಗ್ರಾಮ ಪಂಚಾಯ್ತಿಗಳ ಸಮಗ್ರ ಮಾಹಿತಿ ಈಗ ಅಂಗೈಯಲ್ಲಿ ಲಭ್ಯ!

ಗ್ರಾಮ ಪಂಚಾಯ್ತಿಯಲ್ಲಿನ ಜನಸಂಖ್ಯೆ, ಭೂಪ್ರದೇಶ, ಅದರ ಬಳಕೆ, ಆರೋಗ್ಯ, ಶಿಕ್ಷಣ, ಸಾಮಾಜಿಕ-ಆರ್ಥಿಕ ಸ್ಥಿತಿ, ಹವಾಮಾನ ಸೇರಿದಂತೆ ವಿವಿಧ ರೂಪದ ದತ್ತಾಂಶಗಳನ್ನು ಸಂಗ್ರಹಿಸಿ ಒಂದು ಜಿಯೊ ಪೋರ್ಟಲ್‌ನಲ್ಲಿ ದಾಖಲಿಸಲಾಗಿದೆ. ಹೀಗೆ ಇಡೀ ದೇಶದ ವಿಷಯಾಧಾರಿತ ದತ್ತಾಂಶಗಳನ್ನು ಕ್ರೋಡೀಕರಿಸಿದ್ದು ಇದೇ ಮೊದಲು. ಮುಂದಿನ ದಿನಗಳಲ್ಲಿ ಸರ್ಕಾರ ರೂಪಿಸುವ ಯೋಜನೆಗಳಿಗೆ ಇದು ನೆರವಾಗಲಿದೆ ಎಂದು ಇಸ್ರೋ ಅಧಿಕಾರಿಗಳು ತಿಳಿಸಿದ್ದಾರೆ.

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ಮತ್ತು ರಾಷ್ಟ್ರೀಯ ದೂರ ಸಂವೇದಿ ಕೇಂದ್ರ (ಎನ್‌ಆರ್‌ಎಸ್‌ಸಿ) ಸಂಯುಕ್ತವಾಗಿ ಬಾಹ್ಯಾಕಾಶ ಆಧಾರಿತ ಮಾಹಿತಿ ವಿಕೇಂದ್ರೀಕೃತ ಯೋಜನೆ (ಎಸ್‌ಐಎಸ್‌ಡಿಪಿ) ಅಡಿ ವೆಬ್ ಜಿಯೊ ಪೋರ್ಟಲ್ ಅಭಿವೃದ್ಧಿಪಡಿಸಿದ್ದು, ಇದಕ್ಕೆ 'ಭುವನ್ ಪಂಚಾಯತ್ 3.0' ಎಂದು ನಾಮಕರಣ ಮಾಡಲಾಗಿದೆ. ಇದರಲ್ಲಿ 2.56 ಲಕ್ಷ ಗ್ರಾ.ಪಂ.ಗಳ ಮಾಹಿತಿ ಸಂಗ್ರಹಿಸಲಾಗಿದೆ. 2016-17ರಲ್ಲಿ ಎಸ್‌ಐಎಸ್‌ಡಿಪಿ ಮೊದಲ ಹಂತ ಯಶಸ್ವಿಯಾದ ಹಿನ್ನೆಲೆಯಲ್ಲಿ ಅದರ ಮುಂದುವರಿದ ಭಾಗವಾಗಿ ಅದನ್ನು ಹೊಸ ರೂಪದಲ್ಲಿ ಪರಿಚಯಿಸಲಾಗಿದೆ.

'ಭುವನ' ಉಪಗ್ರಹದ ನೆರವಿನಿಂದ ಭೂಮಿಯ ಮೇಲ್ಮೈಯಿಂದ ಕೇವಲ 2.5 ಮೀ. ದೂರದಿಂದ ಚಿತ್ರಗಳನ್ನು ಸೆರೆಹಿಡಿದು ಕಳುಹಿಸಿದ್ದು, ಅತ್ಯಧಿಕ ರೆಸೊಲ್ಯೂಷನ್ ಹೊಂದಿವೆ. ಹೀಗೆ ಸೆರೆಹಿಡಿದ ಚಿತ್ರಗಳಲ್ಲಿ ಭೂಬಳಕೆ ಮತ್ತು ವ್ಯಾಪ್ತಿ, ರಸ್ತೆ ಮತ್ತು ರೈಲು ಜಾಲ, ಒಳಚರಂಡಿ ಜಾಲ, ಸಾಮುದಾಯಿಕ ಆಸ್ತಿಗಳೆಲ್ಲವೂ ಇವೆ. ಇದರೊಂದಿಗೆ 2011ರ ಜನಗಣತಿಗೆ ಹೋಲಿಕೆ ಮಾಡಿ, ದತ್ತಾಂಶಗಳನ್ನು ವಿಜ್ಞಾನಿಗಳು ವಿಶ್ಲೇಷಣೆ ಮಾಡಿದ್ದಾರೆ.

**ನವ ಭಾರತಕ್ಕೆ ಬಾಹ್ಯಾಕಾಶ ತಂತ್ರಜ್ಞಾನ ಸಾಧನ:** ಕೇಂದ್ರ ಪರಮಾಣು ಶಕ್ತಿ ಮತ್ತು ಬಾಹ್ಯಾಕಾಶ ಇಲಾಖೆ ಖಾತೆಯ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಈ 'ಭುವನ್ ಪಂಚಾಯತ್ ವಿ3' ಪೋರ್ಟಲ್ ಬಿಡುಗಡೆ ಮಾಡಿದರು. ನಂತರ ಮಾತನಾಡಿದ ಅವರು, ಪ್ರಧಾನಿ ನರೇಂದ್ರ ಮೋದಿ ಅವರ ಕನಸಿನ ಭಾರತ ನಿರ್ಮಾಣಕ್ಕೆ ದೇಶದ ಬಾಹ್ಯಾಕಾಶ ತಂತ್ರಜ್ಞಾನವು ಪೂರಕ ಮತ್ತು ಅತ್ಯಗತ್ಯ ಸಾಧನ ಎಂದು ವಿಶ್ಲೇಷಿಸಿದರು.

ಇಸ್ರೋ ಅಧ್ಯಕ್ಷ ಕೆ. ಶಿವನ್ ಮಾತನಾಡಿ, ಸಂಸ್ಥೆಯು ದೇಶದ ಅಭಿವೃದ್ಧಿಗೆ ನಿರಂತರವಾಗಿ ಶ್ರಮಿಸುತ್ತಿದೆ. ಈ ನಿಟ್ಟಿನಲ್ಲಿ ಹಲವಾರು ಅಪ್ಲಿಕೇಷನ್‌ಗಳನ್ನು ಅಭಿವೃದ್ಧಿಪಡಿಸಿದೆ. ಈಗ ಲಭ್ಯವಿರುವ ಮಾಹಿತಿಗಳು ಗ್ರಾಮೀಣಾಭಿವೃದ್ಧಿಗೆ ಸಾಕಷ್ಟು ಅನುಕೂಲವಾಗಿದೆ ಎಂದರು.